ವೇತನ ನಿಗದಿಗಾಗಿ ಮತ್ತು ಪಿಂಚಣಿ ಸೌಲಭ್ಯಕ್ಕಾಗಿ ಗಣನೆಗೆ ತೆಗೆದುಕೊಂಡು ಅರ್ಹತಾ ದಿನಾಂಕ ನಿಗಧಿಪಡಿಸುವ ಕಾನೂನು ಕ್ರಮ ಏನಾದರೂ ಸರ್ಕಾರದಲ್ಲಿ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಯಾವ ದಿನಾಂಕದಿಂದ ಅರ್ಹತಾ ದಿನಾಂಕ ನಿಗಧಿಪಡಿಸಲಾಗುವುದೆ?

ಶ್ರೀ ಖಮರುಲ್ ಇಸ್ಲಾಂ (ಕಾಮಿಕ ಸಚಿವರು) :

ಅ) ಮಿತವೇತನ ಪದವೀಧರರು ದಿನಾಂಕ:11-5-1991 ರಿಂದ ಸಲ್ಲಿಸಿದ ಸೇವೆಯನ್ನು ವಿಶ್ರಾಂತಿ ವೇತನಕ್ಕೆ ಅರ್ಹತಾದಾಯಕ ಸೇವೆಯಂದು ಪರಿಗಣಿಸಲಾಗುತ್ತದೆ. ಯಾವುದೇ ಮಿತ ವೇತನ ಪದವೀಧರರು 10 ವರ್ಷಗಳಿಗಿಂತ ಕಡಿಮೆ ಸೇವೆಯನ್ನು ಸಲ್ಲಿಸಿ ನಿವೃತ್ತರಾಗುವ ಪ್ರಕರಣಗಳಲ್ಲಿ ಅವರು ದಿ: 1-5-1991 ಕ್ಕೂ ಹಿಂದೆ ಸಲ್ಲಿಸಿರುವ ಸೇವೆಯ ಕಾಲು ಭಾಗವನ್ನು 10 ವರ್ಷಗಳಿಗೆ ಕೊರತೆಯಾಗುವ ಅವಧಿಗೆ ಸೀಮಿತಗೊಂಡಂತೆ 3 ವರ್ಷಗಳ ಗರಿಷ್ಟ ಮಿತಿಗೆ ಒಳಪಟ್ಟು ಅರ್ಹತಾದಾಯಕ ಸೇವೆಯೆಂದು ವಿಶ್ರಾಂತಿ ವೇತನ ಸೌಲಭ್ಯಕ್ಕಾಗಿ ಪರಿಗಣಿಸಲಾಗುತ್ತದೆ.

ಇದನ್ನು ಹೊರತುಪಡಿಸಿ ಇನ್ನಾವುದೇ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

### ಬೈಂದೂರನ್ನು ತಾಲ್ಲೂಕು ಆಗಿ ಮಾರ್ಪಡಿಸುವುದು

631 (286) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉಡುಪಿ ಜಿಲ್ಲೆಯ ಬೈಂದೂರನ್ನು ತಾಲ್ಲೂಕು ಆಗಿ ಪರಿವರ್ತಿಸುವ ಪ್ರಸ್ತಾವನೆ ಸರಕಾರದ ಮುಂದಿದೆಯೆ:

ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು:

ಇ) ಇಲ್ಲದಿದ್ದಲ್ಲಿ, ರಾಜ್ಯದಲ್ಲಿ ಹಾಗೂ ಜಿಲ್ಲೆಯಲ್ಲಿ ಅತೀ ಹೆಚ್ಚು ಜನಸಂಖ್ಯೆ ಮತ್ತು ಅತೀ ದೊಡ್ಡ ವಿಸ್ತೀರ್ಣ ಹೊಂದಿರುವ ಬೈಂದೂರನ್ನು ತಾಲ್ಲೂಕು ಮಾಡದಿರುವ ಕಾರಣಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ದೊಡ್ಡ ತಾಲ್ಲೂಕುಗಳನ್ನು ಪುನರ್ ವಿಂಗಡಿಸಿ ಹೊಸ ತಾಲ್ಲೂಕುಗಳನ್ನು ರಚಿಸಿರುವ ಬದಲು ಎಲ್ಲೆಲ್ಲಿ ಕೆಲಸದ ಒತ್ತಡ ಇದೆಯೋ ಅಲ್ಲಿ ವಿಶೇಷ ತಹಸೀಲ್ದಾರ್‌ರನ್ನು ನೇಮಕ ಮಾಡುವ ಬಗ್ಗೆ ಸರ್ಕಾರವು ತೀರ್ಮಾನಿಸಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

### 7 ಎ ಭೂ ನ್ಯಾಯ ಮಂಡಳಿಗಳು

632 (287) ಶ್ರೀ ಗೋಪಾಲ್ ಪೂಜಾರಿ ಕೆ. (ಬೈಂದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 7 ಎ ಭೂ ನ್ಯಾಯ ಮಂಡಳಿಯಲ್ಲಿ ಅಸಿಸ್ಟೆಂಟ್ ಕಮೀಷನರ್‌ರವರು ಮಾತ್ರ ಇರಲು ಕಾರಣಗಳೇನು?

ಆ) ಇತರೇ ಸಮಿತಿಗಳಂತೆ ಇಲ್ಲಿಯೂ ಸಹ ಸಮಿತಿ ರಚಿಸಬಾರದೇಕೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ವಿಧಾನ ಮಂಡಲ ತನ್ನ ವಿವೇಚನೆಗೊಳಪಟ್ಟು ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ ಎ 7ನೇ ಅಡಿಯಲ್ಲಿ ಭೂ ಮಂಜೂರಾತಿಯನ್ನು ಮಾತ್ರ ಮಾಡಬೇಕೆಂದು ಶಾಸನ ಮಾಡಿರುತ್ತದೆ. ಇದರಡಿಯಲ್ಲಿ ಸ್ವೀಕೃತವಾದ 7ಎ ಅರ್ಜಿಗಳನ್ನು ಪರಿಗಣಿಸಲು ಉಪ ವಿಭಾಗಾಧಿಕಾರಿ ಅಥವಾ ತತ್ಸಮಾನ ಶ್ರೇಣಿಯ ಕಂದಾಯಾಧಿಕಾರಿಗಳನ್ನು ನಾಮೋದಿಷ್ಟ ಅಧಿಕಾರಿಯನ್ನಾಗಿ ನಿಯುಕ್ತಿಗೊಳಿಸಲಾಗಿದೆ.

ಆ) ಸದರಿ ಕಲಂನಲ್ಲಿ ಅವಕಾಶ ಇಲ್ಲದೇ ಇರುವುದರಿಂದ ಸಮಿತಿ ರಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

## ಬೈಂದೂರಿನ ವಿಧಾನ ಸಭಾ ಕ್ಷೇತ್ರದಲ್ಲಿನ ದೇವಾಲಯಗಳ ದುರಸ್ಥಿ ನವನಿರ್ಮಾಣಕ್ಕೆ ಹಣ ಬಿಡುಗಡೆ

633 (288) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2000-2001, 2001-2002, 2002-2003ನೇ ಸಾಲಿನಲ್ಲಿ ಇದುವರೆವಿಗೂ ರಾಜ್ಯದಲ್ಲಿನ ದೇವಾಲಯಗಳ ದುರಸ್ಥಿ ಮತ್ತು ನವ ನಿರ್ಮಾಣಕ್ಕೆ ಸಹಾಯಧನ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; (ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ಒದಗಿಸುವುದು)

ಆ) ಇವುಗಳ ಪೈಕಿ ಸಹಾಯಧನ ಮಂಜೂರು ಮಾಡಲಾದ ಅರ್ಜಿಗಳ ಸಂಖ್ಯೆ ಮತ್ತು ಮೊತ್ತ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ಒದಗಿಸುವುದು)

ಇ) ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ ಈ ಕಾಮಗಾರಿಗಳಿಗೆ ಅತೀ ಕಡಿಮೆ ಹಣ ಬಿಡುಗಡೆ ಮಾಡಿ ತಾರತಮ್ಯ ಮಾಡಿರಲು ಕಾರಣಗಳೇನು; ಇದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

ಅ) 2000 ರಿಂದ 2003ನೇ ಸಾಲಿನವರೆಗೆ ಧನ ಸಹಾಯ ಕೋರಿ ಬಂದ ಅರ್ಜಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.

| | |
|---|---|
| 2000-2001 | 715 |
| 2001-2002 | 1077 |
| 2001-2003 | 591 |

ಆ) 2000-2001 ನೇ ಸಾಲಿನಲ್ಲಿ ಒಟ್ಟು 395 ಧಾರ್ಮಿಕ ಸಂಸ್ಥೆಗಳಿಗೆ ರೂ. 231.00 ಲಕ್ಷಗಳು, 2001-2002ನೇ ಸಾಲಿನಲ್ಲಿ 953 ಧಾರ್ಮಿಕ ಸಂಸ್ಥೆಗಳಿಗೆ ರೂ. 226.38 ಲಕ್ಷಗಳು ಅನುದಾನ ಬಿಡುಗಡೆ ಮಾಡಲಾಗಿದೆ.

2002-2003ನೇ ಸಾಲಿನಲ್ಲಿ ಇನ್ನೂ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

(ಅನುದಾನ ಕೋರಿ ಬಂದ ಅರ್ಜಿಗಳ ಸಂಖ್ಯೆ, ಮಂಜೂರಾದ ಮೊತ್ತ, ಮಂಜೂರಾದ ಧಾರ್ಮಿಕ ಸಂಸ್ಥೆಗಳ ಜಿಲ್ಲಾವಾರು ವಿವರ ಅನುಬಂಧ - 1 ಮತ್ತು 2 ರಲ್ಲಿ ಲಗತ್ತಿಸಿದೆ)

ಇ) ಧಾರ್ಮಿಕ ಸಂಸ್ಥೆಯ ಮತಿಯಿಂದ ಜೀರ್ಣೋದ್ಧಾರ ಕಾಮಗಾರಿ ಕೈಗೊಂಡು ಅನುದಾನ ಕೋರಿಕೆ ಬಗ್ಗೆ ನಿಯಮಾನುಸಾರ ಧಾರ್ಮಿಕ ದತ್ತಿ ಆಯುಕ್ತರ ಮೂಲಕ ಸರ್ಕಾರದಲ್ಲಿ ಸ್ವೀಕೃತವಾದ ಧಾರ್ಮಿಕ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.